ಅನುಬಂಧ–'ಸಿ'

ತಾಳೆಎಣ್ಣೆ ಸರಬರಾಜಿನ ಬಗ್ಗೆ ಸಂಬಂಧಪಟ್ಟ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಂದ ಬಂದ ದೂರಿನ ಮೇಲೆ ತುಮಕೂರಿನ ಜಿಲ್ಲಾ ಪರಿಷತ್ ತೆಗೆದುಕೊಂಡ ಕ್ರಮ

	ದೂರುಗಳು		ತೆಗೆದುಕೊಂಡ ಕ್ರಮ
೧	ಮಧುಗಿರಿ ತಾಲ್ಲೂಕು, ಪುರುವರ ಹೋಬಳಿ ಕೊಂಡವಾಡಿ ಗ್ರಾಮದ ನ್ಯಾಯಬೆಲೆ ಅಂಗಡಿ ಪರವಾನಗಿ ಹೊಂದಿರುವವರು ೩೩ ಕೆ. ಜಿ. ತಾಳೆಎಣ್ಣೆಯ ದುರುಪಯೋಗ ಮಾಡಿದ ಬಗ್ಗೆ	:	ದಿನಾಂಕ ೨–೧೧–೮೭ರಂದು ತುಮಕೂರಿನ ಜಿಲ್ಲಾಧಿಕಾರಿಯವರಿಗೆ ಕಾಯಿದೆಯನ್ವಯ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.
೨	ಕುಣಿಗಲ್ ತಾಲ್ಲೂಕು, ಕೀಲರ ಗ್ರಾಮದ ನ್ಯಾಯಬೆಲೆ ಅಂಗಡಿ ಪರವಾನಗಿ ಹೊಂದಿರುವವರು ೭ ಕೆ.ಜಿ. ತಾಳೆಎಣ್ಣೆಯ ದುರುಪಯೋಗ ಮಾಡಿದ ಬಗ್ಗೆ.	:	ದಿನಾಂಕ ೧೭–೬–೮೭ ರಂದು ತುಮಕೂರಿನ ಜಿಲ್ಲಾಧಿಕಾರಿಯವರಿಗೆ ಕಾಯಿದೆಯನ್ವಯ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.
೩	ಕೊರಟಗೆರೆ ತಾಲ್ಲೂಕು, ಬೊಮ್ಮಲದೇವಿಪುರದ ನ್ಯಾಯಬೆಲೆ ಅಂಗಡಿ ಪರವಾನಗಿ ಹೊಂದಿರುವವರು ೩೮ ಕೆಜಿ ತಾಳೆಎಣ್ಣೆಯ ದುರುಪಯೋಗ ಮಾಡಿದ ಬಗ್ಗೆ.	:	ದಿನಾಂಕ ೮–೧೨–೮೭ರಂದು ತುಮಕೂರಿನ ಜಿಲ್ಲಾಧಿಕಾರಿಯವರಿಗೆ ಕಾಯಿದೆಯನ್ವಯ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ
೪	ಮಧುಗಿರಿ ತಾಲ್ಲೂಕು ಕೊಡಿಗೇನಹಳ್ಳಿ ಹೋಬಳಿ, ಮಂದ್ಲೇನಹಳ್ಳಿ ನ್ಯಾಯಬೆಲೆ ಅಂಗಡಿ ಪರವಾನಗಿ ಹೊಂದಿರುವವರು ೪೦ಕೆ. ಜಿ. ತಾಳೆಎಣ್ಣೆಯ ದುರುಪಯೋಗ ಮಾಡಿದ ಬಗ್ಗೆ	:	ದಿನಾಂಕ ೮-೩–೮೮ರಂದು ತುಮಕೂರಿನ ಜಿಲ್ಲಾಧಿಕಾರಿಯವರಿಗೆ ಕಾಯಿದೆಯನ್ವಯ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.
೫	ತುಮಕೂರು ತಾಲೂಕಿನ ಬೀರನಕಾಳು ಹಳ್ಳಿ ನ್ಯಾಯಬೆಲೆ ಅಂಗಡಿ ಪರವಾನಗಿ ಹೊಂದಿರುವವರು ೨೦೦ ಕೆ. ಜಿ. ತಾಳೆಎಣ್ಣೆಯ ದುರುಪಯೋಗ ಮಾಡಿದ ಬಗ್ಗೆ	:	ದಿನಾಂಕ ೧೧–೩–೮೮ರಂದು ತುಮಕೂರಿನ ಜಿಲ್ಲಾಧಿಕಾರಿಯವರಿಗೆ ಕಾಯಿದೆಯನ್ವಯ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.
೬	ತಿಪಟೂರು ತಾಲ್ಲೂಕು, ಕಸಬ ಹೋಬಳಿ ಬೀದರಗುಡಿಯ ನ್ಯಾಯಬೆಲೆ ಅಂಗಡಿ ಪರವಾನಗಿ ಹೊಂದಿರುವವರು ೨೦೦೦ ಕೆ. ಜಿ. ತಾಳೆಎಣ್ಣೆಯ ದುರುಪಯೋಗ ಮಾಡಿದ ಬಗ್ಗೆ	:	ದಿನಾಂಕ ೧೫–೩–೮೮ರಂದು ತುಮಕೂರಿನ ಜಿಲ್ಲಾಧಿಕಾರಿಯವರಿಗೆ ಕಾಯಿದೆಯನ್ವಯ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.

ಜಿಲ್ಲಾ ಆಸ್ಪತ್ರೆಗಳನ್ನು ಮೆಡಿಕಲ್ ಕಾಲೇಜುಗಳಿಗೆ ವಹಿಸಿರುವುದು

೧೭೫೩. ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಆಸ್ಪತ್ರೆಗಳನ್ನು ಮೆಡಿಕಲ್ ಕಾಲೇಜುಗಳಿಗೆ ವಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಜಿಲ್ಲಾ ಆರೋಗ್ಯ ಅಧಿಕಾರಿಯವರ ಸ್ಥಾನಮಾನವೇನು? ಆಸ್ಪತ್ರೆಯ ಆಡಳಿತ ಮತ್ತು ಒಡೆತನದ ಜವಾಬ್ದಾರಿ ಯಾರದಾಗಿರುತ್ತದೆ?

ಆ) ಜಿಲ್ಲಾ ಆಸ್ಪತ್ರೆಗಳನ್ನು ನಿರ್ವಹಿಸಿಕೊಂಡಿರುವ ವೈದ್ಯಕೀಯ ಕಾಲೇಜುಗಳಾವುವು (ಆಸ್ಪತ್ರೆ ವಾರು, ಕಾಲೇಜುವಾರು ವಿವರ ನೀಡುವುದು)

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಹೌದು.

ಜಿಲ್ಲಾ ಆರೋಗ್ಯ ಅಧಿಕಾರಿಗಳ ಸ್ಥಾನ ಮಾನದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಆ)

೧) ಕಸ್ತೂರ್‌ಬಾ ವೈದ್ಯಕೀಯ ವಿದ್ಯಾಲಯ, ಮಂಗಳೂರು	...	ಜಿಲ್ಲಾ ವೆನ್‌ಲಾಕ್ ಆಸ್ಪತ್ರೆ, ಮಂಗಳೂರು
೨) ಎಂ.ಆರ್. ವೈದ್ಯಕೀಯ ಮಹಾವಿದ್ಯಾಲಯ, ಗುಲ್ಬರ್ಗಾ	...	ಜಿಲ್ಲಾ ಆಸ್ಪತ್ರೆ, ಗುಲ್ಬರ್ಗಾ.
೩) ಜೆ.ಎನ್. ವೈದ್ಯಕೀಯ ವಿದ್ಯಾಲಯ, ಬೆಳಗಾಂ	...	ಜಿಲ್ಲಾ ಆಸ್ಪತ್ರೆ, ಬೆಳಗಾಂ
೪) ಆಲ್‌ಅಮೀನ್ ವೈದ್ಯ ಮಹಾವಿದ್ಯಾಲಯ, ಬಿಜಾಪುರ	...	ಜಿಲ್ಲಾ ಆಸ್ಪತ್ರೆ, ಬಿಜಾಪುರ
೫) ಆದಿಚುಂಚನಗಿರಿ ವೈದ್ಯಕೀಯ ವಿದ್ಯಾಲಯ, ಬೆಳ್ಳೂರು	...	ಜಿಲ್ಲಾ ಆಸ್ಪತ್ರೆ, ಹಾಸನ ಮತ್ತು ಮಂಡ್ಯ
೬) ದೇವರಾಜ್ ಅರಸ್ ವೈದ್ಯಕೀಯ ವಿದ್ಯಾಲಯ, ಕೋಲಾರ	...	ಎಸ್.ಎನ್.ಆರ್. ಆಸ್ಪತ್ರೆ, ಕೋಲಾರ.

ಸಿದ್ಧಗಂಗಾ ಮಠದ ಘಟನೆಯ ಬಗ್ಗೆ

೧೭೦. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ ೩೧-೩-೧೯೮೮ರಂದು ತುಮಕೂರು ಜಿಲ್ಲೆಯ ಸಿದ್ಧಗಂಗಾ ಮಠದಲ್ಲಿ ನಡೆದ ಘಟನೆಯ ಹಿನ್ನೆಲೆಯಲ್ಲಿ ಸುಡಲಾದ ಸರ್ಕಾರಿ ಹಾಗೂ ಖಾಸಗಿ ಬಸ್ಸುಗಳ ಸಂಖ್ಯೆ ಎಷ್ಟು? ಇದರಿಂದ ಸರ್ಕಾರಕ್ಕೆ ಆದ ನಷ್ಟ ಎಷ್ಟು?

ಆ) ತುಮಕೂರು ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳನ್ನು ನಿಲ್ಲಿಸಲಾಗಿದ್ದ ದಿನಗಳೆಷ್ಟು ಹಾಗೂ ಇದರಿಂದಾದ ನಷ್ಟ ಎಷ್ಟು?

ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ದಿನಾಂಕ ೧-೪-೧೯೮೮ರಿಂದ ೫-೪-೧೯೮೮ ರವರೆಗೆ ನಡೆದ ಗಲಭೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ೬ ಬಸ್ಸುಗಳಿಗೆ ಬೆಂಕಿ ಹಚ್ಚಿಸಲಾಯಿತು. ಹಾಗೂ ಮತ್ತೊಂದು ಬಸ್ಸಿಗೆ ಮುಂಭಾಗದ ಗಾಜುಗಳನ್ನು (ವಿಂಡ್‌ಸ್ಕ್ರೀನ್) ಒಡೆದು ಹಾಕಲಾಯಿತು. ಇದರಿಂದಾಗಿ ಸಂಸ್ಥೆಗೆ ಸುಮಾರು ೧೭.೫ ಲಕ್ಷ ರೂ.ಗಳ ಹಾನಿಯಾಗಿದೆ.

ಆ) ದಿನಾಂಕ ೩-೪-೧೯೮೮ರಿಂದ ೧೫-೪-೧೯೮೮ರವರೆಗೆ ಸಂಸ್ಥೆಯ ತುಮಕೂರು ಘಟಕದ ೮೩ ಪೆಡ್ಡೂಲ್‌ಗಳನ್ನು ರದ್ದುಪಡಿಸಲಾಯಿತು. ತತ್ಸಂಬಂಧವಾಗಿ ಸಂಸ್ಥೆಗೆ ಪ್ರತಿದಿನ ರೂ. ೧.೨ ಲಕ್ಷ ವರಮಾನ ಕಡಿಮೆಯಾಯಿತು.